**ಒ.ಎಸ್. ನಂ. 192/2014** **ಪಿ. ಡಬ್ಲ್ಯೂ - 1**

ದಿನಾಂಕಃ **25.01.2023** ರಂದು ಸಾಕ್ಷಿದಾರರಿಗೆ ಪ್ರಮಾಣ ವಚನ ಮಾಡಿಸಲಾಯಿತು.

**ಪಾಟೀಸವಾಲು ಃ ಪ್ರತಿವಾದಿ ಪರ ಶ್ರೀ ಟಿ. ಎಲ್ ವಕೀಲರಿಂದ,**

ನಾನು ಆನಕ್ಷರಸ್ಥ, ತಮ್ಮಣ್ಣನ ತಂದೆ ಜವರಯ್ಯನನ್ನು ನೋಡಿದ್ದೆ, ಅವರು ನಾವು ಚಿಕ್ಕವರಿದ್ದಾಗಲೇ ಮೃತಪಟ್ಟಿರುತ್ತಾರೆ. ವಾದಿ ನಮ್ಮ ದೊಡ್ಡಮ್ಮ, ಅಕ್ಕಯ್ಯಮ್ಮ ಮತ್ತು ಪುಟ್ಟಮ್ಮ ಇಬ್ಬರೂ ಅಕ್ಕತಂಗಿಯರು. ವೆಂಕಟಲಕ್ಷಮ್ಮಮ ಮತ್ತು ತಮ್ಮಯ್ಯನ ವಿವಾಹವನ್ನು ನಾನು ಖುದ್ದಾಗಿ ನೋಡಿಲ್ಲ ಎಂದರೆ ಸರಿ. ಅದೇ ರೀತಿ ನಾಗಮ್ಮ ಮತ್ತು ತಮ್ಮಣ್ಣನ ವಿವಾಹಕೂ ನಾನು ಹೊಗಿಲ್ಲ ಎಂದರೆ ಸರಿ. ಅದೇ ರೀತಿ ಪುಟ್ಟಮ್ಮ ಮತ್ತು ತಮ್ಮಣನ ವಿವಾಹ ಗೊತ್ತಿಲ್ಲ ಎಂದರೆ ಸರಿ. 1,3 ಮತ್ತು 4ನೇ ಪ್ರತಿವಾದಿಯರು ಹುಟ್ಟಿದ ದಿನಾಂಕ ಹೇಳಲಾಗುವುದಿಲ್ಲ. ಅದೇ ರೀತಿ ತಮ್ಮಣ್ಣನವರು ಮೃತಪಟ್ಟ ದಿನಾಂಕ ಹೇಳಲಾಗುವುದಿಲ್ಲ. ವಾದಪತ್ರದಲ್ಲಿ ಕೆಲವು ಜಮೀನುಗಳು ತರಿ ಮತ್ತು ಕೆಲವು ಭಾಗಇತ್ತು ಎಂದು ಹೇಳಲಾಗುವುದಿಲ್ಲ.ಅದೇ ರೀತಿ ಸದರಿ ಸ್ವತ್ತುಗಳಿಂದ ಎಷ್ಟು ಅದಾಯ ಬರುತ್ತಿತ್ತು ಎಂದು ನನಗೆ ಗೊತ್ತಿಲ್ಲ. ಸದರಿ ಸ್ವತ್ತುಗಳಿಂದ ಬಂದ ಅದಾಯವನ್ನು ಯಾವ ರೀತಿ ವ್ಯಯ ಮಾಡುತ್ತಿದ್ದರೂ ಎಂದು ಹೇಳಲಾಗುವುದಿಲ್ಲ. ದಾವಾ ಸ್ವತ್ತುಗಳನ್ನು ಯಾರಿಗೆ ಯಾವಾಗ ಮತ್ತು ಎಷ್ಟು ಮೊತ್ತಕ್ಕೆ ಮಾರಾಟ ಮಾಡಲು ಪ್ರಯತ್ನ ಪಟ್ಟಿದ್ದಾರೆ ಎಂದು ನನಗೆ ಗೊತ್ತಿಲ್ಲ. 5 ರಿಂದ 7ನೆ ಪ್ರತಿವಾದಿಗೆ ಮಾರಾಟ ಮಾಡಿರುವ ಸರ್ವೆ ನಂಬರ್ ಹೇಳಲಾಗುವುದಿಲ್ಲ. ಸದರಿಯವರಿಗೆ ನಮ್ಮ ದೊಡ್ಡಪ್ಪ ತಮ್ಮಣ್ಣ ನವರು ಮಾರಾಟ ಮಾಡಿರುತ್ತಾರೆ. 4ನೇ ಪ್ರತಿವಾದಿಯನ್ನು ವಿಭಾಗ ಮಾಡಿಕೊಡುವುದಾಗಿ ನಮ್ಮ ದೊಡಮ್ಮ ಕೋರಿರುವುದಾಗಿ ಹೇಳುತ್ತಾರೆ. ಈ ಕುರಿತು ಯಾವುದೇ ಪಂಚಾಯಿತಿ ನಡೆದಿಲ್ಲ. ನಮ್ಮ ದೊಡ್ಡಮ್ಮ ಹೇಳಿದ ಲೀಗಲ್ ನೊಟಿಸ್ ಗೆ 3 ಮತ್ತು 4ನೇ ಪ್ರತಿವಾದಿಯರು ಏನೂ ತಕರಾರು ಹಾಕಿದ್ದಾರೆ ಎಂದು ನನಗೆ ಗೊತ್ತಿಲ್ಲ. 1995 ರಿಂದ 2013ರವರೆಗೆ ವಾದಿ ಅಂಗನವಾಡಿ ಸಹಾಯಕಿ ಅಗಿ ಕೆಲಸ ನಿರ್ವಹಿಸಿ ನಿವೃತ್ತಿ ಹೊಂದಿದ್ದಾರೆ ಎಂದರೆ ಸರಿ. ಆ ಸಂದರ್ಭದಲ್ಲಿ ತನ್ನ ಗಂಡನ ಹೆಸರು ಸಿದ್ದಪ್ಪ ಶೀಳನೆರೆ ಗ್ರಾಮ ಎಂದು ಮಾಹಿತಿ ನೀಡಿದ್ದಾರೆ ಎಂದರೆ ಸಾಕ್ಷಿಯು ಅವರ ತಂದೆ ಹೆಸರು ಶಾಂಭಯ್ಯ ಸಿದ್ದಯ್ಯ ಎಂದು ಹೆಳಿರುತ್ತಾರೆ. ತಮ್ಮಣನ್ನು ತಮ ಜೀವಿತ ಅವದಿಯಲಸ್ಲಿ ವಾದಿಯನ್ನು ಮದುವೆ ಮಾಡಿಕೊಂಡಿರಲಿಲ್ಲ ಎಂದರೆ ಸರಿಯಲ್ಲ. ಅವರು ವೆಂಕಟಲಕ್ಷ್ಮಿಯನ್ನು ಮಾತ್ರ ವಿವಾಹ ಅಗಿದ್ದರು ಎಂದರೆ ಸರಿಯಲ್ಲ. 1ನೇ ಪ್ರತಿವಾದಿ 2 ವರ್ಷಕ್ಕೆ ಮೃತಪಟ್ಟ ಕಾರಣಕ್ಕೆ 2ನೇ ಮದುವೆ ಮಾಡಿಕೊಂಡರು ಎಂದರೆ ಸರಿಯಲ್ಲ. ನ್ಯಾಯಾಲಯಕ್ಕೆ ಬಂದು ವಿಚಾರಣೆಗೆ ಹಾಜರಾಗದೆ

ವಾಸ್ತವಾಂಶ ಗೊತ್ತಾಗುತ್ತದೆ ಎಂದು ನನಗೆ ಪ್ರತಿನಿದಿಸಲು ತಿಳಿಸಿರುತಾರೆ. ಪುಟ್ಟಮ್ಮ ತಮ್ಮಣ್ಣನ ಹೆಂಡತಿ ಅಲ್ಲ ಎಂದರೆ ಸರಿಯಲ್ಲ. ಪುಟ್ಟಮ್ಮ ಆರೋಗ್ಯವಾಗಿದ್ದರೂ ಅವರ ಪರವಾಗಿ ನಾನು ಹಾಜರಾಗಿ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ವಾದಿ ಭಾಗಾಂಶ ಪಡೆಯಲು ಅರ್ಹಳಲ್ಲ ಎಂದರೆ ಸರಿಯಲ್ಲ.

**ಮರು ವಿಚಾರಣೆ : ಇಲ್ಲ.**

(ಸಾಕ್ಷಿದಾರರ ಹೇಳಿಕೆಯನ್ನು ನನ್ನ ಉಕ್ತಲೇಖನಕ್ಕೆ ಅನುಸಾರವಾಗಿ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)

**ಸಾ ಓ ಹೇ ಕೇ ಸ ಅದೆ.**

**ಸಿವಿಲ್ ನ್ಯಾಯಾಧೀಶರು ಮತ್ತು ಪ್ರದನ್ಯಾ.**
**ದಂಡಾಧಿಕಾರಿಗಳು, ಕೃಷ್ಣರಾಜಪೇಟೆ.**